# All India Radio: Bangalore
# National Bulletin In Kannada
# 21.12.2025  19.35 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ವಿಕಸಿತ ಭಾರತ್-ಜಿ ರಾಮ್-ಜಿ ಮಸೂದೆ-೨೦೨೫ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದನೆ
2. ಅರಾವಳಿ ಶ್ರೇಣಿಯ ರಕ್ಷಣಾ ಮಾನದಂಡಗಳಲ್ಲಿ ಸಡಿಲಿಕೆ ಇಲ್ಲ - ಸಚಿವ ಭೂಪೇಂದರ್ ಯಾದವ್ ಸ್ಪಷ್ಟನೆ
3. ಇಸ್ರೋದಿಂದ ಇದೇ ೨೪ರಂದು ಬ್ಲೂಬರ್ಡ್ ಬ್ಲಾಕ್-೨ ಸಂವಹನ ಉಪಗ್ರಹ ಉಡಾವಣೆ
4. ಮಹಿಳಾ ಟಿ-೨೦ ಕ್ರಿಕೆಟ್: ಸರಣಿಯ ಮೊದಲ ಪಂದ್ಯದಲ್ಲಿಂದು ಶ್ರೀಲಂಕಾ ವಿರುದ್ಧ ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ

<><><><>

ವಿಕಸಿತ ಭಾರತ್-ಜಿ ರಾಮ್-ಜಿ ಮಸೂದೆ-೨೦೨೫ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದನೆ ನೀಡಿದ್ದಾರೆ. ಈಗಾಗಲೇ ಸಂಸತ್ತು ಈ ಕಾಯ್ದೆಯನ್ನು ಚಳಿಗಾಲದ ಅಧಿವೇಶನದಲ್ಲಿ ಅಂಗೀಕರಿಸಿತ್ತು. ಈ ಕಾಯ್ದೆಯು ಗ್ರಾಮೀಣ ಕುಟುಂಬಗಳಿಗೆ ಪ್ರತಿ ಹಣಕಾಸು ವರ್ಷಕ್ಕೆ ಶಾಸನಬದ್ಧ ವೇತನ ಉದ್ಯೋಗ ಖಾತರಿಯನ್ನು ೧೨೫ ದಿನಗಳಿಗೆ ಹೆಚ್ಚಿಸಿದೆ. ಗ್ರಾಮೀಣಾಭಿವೃದ್ಧಿ ಸಚಿವಾಲಯವು ಗ್ರಾಮೀಣ ಉದ್ಯೋಗ ನೀತಿಯ ರೂಪಾಂತರದಲ್ಲಿ ಇದು ಮಹತ್ವದ ಮೈಲಿಗಲ್ಲನ್ನು ಗುರುತಿಸುತ್ತದೆ. ಈ ಕಾಯ್ದೆಯು ಸಬಲೀಕರಣ, ಸಮಗ್ರ ಬೆಳವಣಿಗೆ, ಅಭಿವೃದ್ಧಿ ಉಪಕ್ರಮಗಳ ಒಮ್ಮುಖ ಮತ್ತು ಸ್ಯಾಚುರೇಶನ್ ಆಧಾರಿತ ವಿತರಣೆಯನ್ನು ಮುನ್ನಡೆಸಲು ಪ್ರಯತ್ನಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

<><><><>

ಅರಾವಳಿ ಶ್ರೇಣಿಯ ರಕ್ಷಣಾ ಮಾನದಂಡಗಳನ್ನು ದುರ್ಬಲಗೊಳಿಸುವ ಹೇಳಿಕೆಗಳನ್ನು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅಲ್ಲಗೆಳೆದಿದ್ದಾರೆ. ದೀರ್ಘಕಾಲದಿಂದ ಬಾಕಿ ಇರುವ ಮತ್ತು ಸೂಕ್ಷ್ಮ ಪರಿಸರ ಸಮಸ್ಯೆಯ ಕುರಿತು ಗೊಂದಲವನ್ನು ಹರಡುವ ಉದ್ದೇಶಪೂರ್ವಕ ಪ್ರಯತ್ನ ಇದು ಈ ನಿಟ್ಟಿನಲ್ಲಿ ಯಾವುದೇ ಸಡಿಲಿಕೆ ನೀಡಲಾಗಿಲ್ಲ ಎಂದು ಅವರು ಹೇಳಿದರು. ಕೋಲ್ಕತ್ತಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಶ್ವದ ಅತ್ಯಂತ ಹಳೆಯ ಪರ್ವತ ಪ್ರದೇಶಗಳಲ್ಲಿ ಒಂದಾದ ಅರಾವಳಿ ಶ್ರೇಣಿಯು ದೆಹಲಿ, ರಾಜಸ್ಥಾನ, ಹರಿಯಾಣ ಮತ್ತು ಗುಜರಾತ್ ಎಂಬ ನಾಲ್ಕು ರಾಜ್ಯಗಳನ್ನು ವ್ಯಾಪಿಸಿದೆ. ಅರಾವಳಿ ಶ್ರೇಣಿಗೆ ಸಂಬಂಧಿಸಿದ ವಿಷಯವು ೧೯೮೫ ರಿಂದ ನ್ಯಾಯಾಂಗ ಪರಿಶೀಲನೆಯಲ್ಲಿದೆ. ಆರಂಭದಿಂದಲೂ, ವಿಶೇಷವಾಗಿ ಗಣಿಗಾರಿಕೆ ಚಟುವಟಿಕೆಗಳ ಮೇಲೆ ಕಟ್ಟುನಿಟ್ಟಿನ ನಿಯಂತ್ರಣದ ಮೇಲೆ ಒತ್ತು ನೀಡಲಾಗಿದೆ ಎಂದು ಅವರು ಹೇಳಿದರು. ನಿಯಂತ್ರಕ ಲೋಪದೋಷಗಳನ್ನು ತಡೆಗಟ್ಟಲು ಸುಪ್ರೀಂ ಕೋರ್ಟ್ ಎಲ್ಲಾ ನಾಲ್ಕು ರಾಜ್ಯಗಳಿಗೆ ಅರಾವಳಿ ಶ್ರೇಣಿಯ ಏಕರೂಪ ಮಾನದಂಡಗಳನ್ನು ಅಳವಡಿಸಿಕೊಳ್ಳಲು ನಿರ್ದೇಶಿಸಿದೆ. ಈ ಮಾನದಂಡಗಳು ೧೯೬೮ ರ ರಿಚರ್ಡ್ ಮರ್ಫಿ ಅವರ ಭೂವೈಜ್ಞಾನಿಕ ಅಧ್ಯಯನವನ್ನು ಆಧರಿಸಿದೆ ಮತ್ತು ೧೦೦ ಮೀಟರ್ ರಕ್ಷಣಾ ಬಫರ್ ಅನ್ನು ಒಳಗೊಂಡಿದೆ ಎಂದು ಅವರು ಹೇಳಿದರು. ಕೆಲವು ಯೂಟ್ಯೂಬ್ ಚಾನೆಲ್‌ಗಳು ಮತ್ತು ಕೆಲವು ವ್ಯಕ್ತಿಗಳು ೧೦೦ ಮೀಟರ್ ನಿಯಮವು ಪರ್ವತದ ಮೇಲ್ಭಾಗಕ್ಕೆ ಮಾತ್ರ ಅನ್ವಯಿಸುತ್ತದೆ ಎಂದು ಹೇಳುವ ಮೂಲಕ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ಇದು ಸಂಪೂರ್ಣವಾಗಿ ಸುಳ್ಳು ಎಂದು ಯಾದವ್ ಹೇಳಿದ್ದಾರೆ. ನಿಬಂಧನೆಯನ್ನು ಸ್ಪಷ್ಟಪಡಿಸುತ್ತಾ, ಪರ್ವತದ ತಳ ರಚನೆಯಿಂದ ರಕ್ಷಣೆ ವಿಸ್ತರಿಸುತ್ತದೆ. ನೆಲವು ೨೦ ಮೀಟರ್ ಆಳಕ್ಕೆ ಹೋದರೂ ಸಹ, ೧೦೦ ಮೀಟರ್ ರಕ್ಷಣೆಯು ಆ ಹಂತದಿಂದ ಅನ್ವಯಿಸುತ್ತದೆ. ದೆಹಲಿಯ ಅರಾವಳಿ ಬೆಟ್ಟಗಳಲ್ಲಿ ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಮತ್ತು ಈ ವಿಷಯವು ಸುಪ್ರೀಂ ಕೋರ್ಟ್‌ನ ಪರಿಗಣನೆಯಲ್ಲಿದೆ ಎಂದು ಯಾದವ್ ಒತ್ತಿ ಹೇಳಿದರು.

ಧ್ವನಿ : ಭೂಪೇಂದ್ರ ಯಾದವ್

<><><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ-ಇಸ್ರೋ ಇದೇ ೨೪ರಂದು ಬ್ಲೂಬರ್ಡ್ ಬ್ಲಾಕ್-೨ ಎಂಬ ಸಂವಹನ ಉಪಗ್ರಹವನ್ನು ಉಡಾವಣೆ ಮಾಡಲಿದೆ. ಅಮೆರಿಕದ ಎಎಸ್‌ಟಿ ಸ್ಪೇಸ್‌ಮೊಬೈಲ್ ಸಂಸ್ಥೆಗೆ ಸೇರಿದ ಈ ಉಪಗ್ರಹವು ಎಲ್‌ವಿಎಂ೩-ಎಂ೬ ಮೂಲಕ ಕಡಿಮೆ ಭೂಮಿಯ ಕಕ್ಷೆ ತಲುಪುವ ಅತಿದೊಡ್ಡ ವಾಣಿಜ್ಯ ಸಂವಹನ ಉಪಗ್ರಹವಾಗಿರಲಿದೆ. ಇದು ಮುಂದಿನ ತಲೆಮಾರಿನ ಬ್ಲೂಬರ್ಡ್ ಬ್ಲಾಕ್-೨ ಸಂವಹನ ಉಪಗ್ರಹಗಳ ಭಾಗವಾಗಿದ್ದು, ಸಾಮಾನ್ಯ ಮೊಬೈಲ್ ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಬಾಹ್ಯಾಕಾಶ ಆಧಾರಿತ ಸೆಲ್ಯುಲರ್ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ಒದಗಿಸುವಂತೆ ವಿನ್ಯಾಸಗೊಳಿಸಲಾಗಿದೆ.

<><><><>

ವಿಕಸಿತ ಭಾರತ ಜಿ ರಾಮ್ ಜಿ ಮಸೂದೆಯು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮುಂದಿನ ಹಂತವಾಗಿದ್ದು, ಅಭಿವೃದ್ಧಿ ಹಾಗೂ ಬಡವರ ಪರವಾಗಿ ಕಾರ್ಯನಿರ್ವಹಿಸಲಿದೆ ಎಂದು ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ಈ ಮಸೂದೆ ಗ್ರಾಮೀಣ ಕುಟುಂಬಗಳ ವಯಸ್ಕ ಸದಸ್ಯರಿಗೆ ೧೨೫ ದಿನಗಳ ವೇತನ ಸಹಿತ ಉದ್ಯೋಗವನ್ನು ನೀಡಲಿದೆ ಎಂದು ಸಚಿವರು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ನಿರುದ್ಯೋಗ ಭತ್ಯೆ ನೀಡುವ ಹಾಗೂ ವೇತನ ಪಾವತಿಯಲ್ಲಿ ವಿಳಂಬವಾದರೆ ಹೆಚ್ಚುವರಿ ಮೊತ್ತ ನೀಡುವ ವ್ಯವಸ್ಥೆಯೂ ಈ ಮಸೂದೆಯಲ್ಲಿ ಇದೆ. ಕೃಷಿ ಅವಧಿಯಲ್ಲಿ ತೊಂದರೆಗಳನ್ನು ಎದುರಿಸುವ ರೈತರಿಗಾಗಿ ಕೂಡ ಮಸೂದೆ ಅನ್ವಯವಾಗಲಿದೆ. ಈ ಮಸೂದೆಗೆ ೧ ಲಕ್ಷ ೫೧ ಸಾವಿರ ಕೋಟಿ ರೂಪಾಯಿಗಿಂತ ಹೆಚ್ಚಿನ ಮೊತ್ತವನ್ನು ಪ್ರಸ್ತಾಪಿಸಲಾಗಿದೆ ಎಂದು ಸಚಿವರು ತಿಳಿಸಿದರು. ಪಂಚಾಯತ್ ಕಾರ್ಯದರ್ಶಿಗಳು, ಉದ್ಯೋಗ ಸಹಾಯಕರು ಹಾಗೂ ತಾಂತ್ರಿಕ ಸಿಬ್ಬಂದಿಗೆ ಸಮಯಕ್ಕೆ ಸರಿಯಾಗಿ ಮತ್ತು ಸಮರ್ಪಕ ವೇತನ ಒದಗಿಸುವ ಉದ್ದೇಶದಿಂದ ಆಡಳಿತ ವೆಚ್ಚಗಳ ಪಾಲನ್ನು ಶೇಕಡ ೬ರಿಂದ ಶೇಕಡ ೯ಕ್ಕೆ ಹೆಚ್ಚಿಸಲಾಗಿದೆ.

<><><><>

ಮಹಿಳಾ ಕ್ರಿಕೆಟ್‌ನಲ್ಲಿ, ಭಾರತ ತಂಡ ಇಂದು, ವಿಶಾಖಪಟ್ಟಣದ ಡಾ.ವೈ.ಎಸ್. ರಾಜಶೇಖರ ರೆಡ್ಡಿ ಎಸಿಎ-ವಿಡಿಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ೫ ಪಂದ್ಯಗಳ ಸರಣಿಯ ಮೊದಲ ಟಿ-೨೦ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಮೊದಲು ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ದುಕೊಂಡಿದೆ. ಇತ್ತೀಚಿನ ವರದಿ ಬಂದಾಗ ಶ್ರೀಲಂಕಾ ೯ ಓವರ್‌ಗಳಲ್ಲಿ ೧ ವಿಕೆಟ್ ನಷ್ಟಕ್ಕೆ ೪೯ ರನ್‌ಗಳಿಸಿ ಆಡುತ್ತಿದೆ. ಹರ್ಮನ್‌ಪ್ರೀತ್ ಕೌರ್ ನೇತೃತ್ವದಲ್ಲಿ, ಭಾರತ ತಂಡ, ಮಹಿಳಾ ಟಿ-೨೦ ವಿಶ್ವಕಪ್ ಸಿದ್ಧತೆಯ ಭಾಗವಾಗಿ ಶ್ರೀಲಂಕಾ ವಿರುದ್ಧ ಐದು ಟಿ-೨೦ ಪಂದ್ಯಗಳನ್ನು ಆಡಲಿದೆ.

<><><><>

ಸಂಡೇ ಆನ್ ಸೈಕಲ್ ಕಾರ್ಯಕ್ರಮವು ಇಂದು ಜನರಲ್ಲಿ ಆಸಕ್ತಿ ಹಾಗೂ ಸಂಸ್ಕೃತಿಯ ಭಾಗವಾಗಿದೆ ಎಂದು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಂಡಾವಿಯಾ ಹೇಳಿದ್ದಾರೆ. ಪುದುಚೇರಿಯಲ್ಲಿ ಇಂದು ನಡೆದ ಮೊದಲ ವಾರ್ಷಿಕೋತ್ಸವದ ಸಂದರ್ಭದಲ್ಲಿ ಆಯೋಜಿಸಲಾದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೈಹಿಕ ಕ್ಷಮತೆ ಹೆಚ್ಚಿಸಲು ಹಾಗೂ ಸ್ಥೂಲಕಾಯತೆಯ ವಿರುದ್ಧ ಹೋರಾಡಲು ಈ ಕಾರ್ಯಕ್ರಮವನ್ನು ಆರಂಭಿಸಲಾಗಿದ್ದು, ಮಾಲಿನ್ಯವನ್ನು ಕಡಿಮೆ ಮಾಡುವ ಪರಿಹಾರವಾಗಿ ಸೈಕ್ಲಿಂಗ್ ಅನ್ನು ಅಳವಡಿಸಿಕೊಳ್ಳಲು ಜನರನ್ನು ಉತ್ತೇಜಿಸುತ್ತದೆ ಎಂದರು. ಇತ್ತೀಚೆಗೆ ಸಾರ್ವಜನಿಕರ ಭಾಗವಹಿಸುವಿಕೆ ಗಣನೀಯವಾಗಿ ಹೆಚ್ಚಾಗಿದ್ದು, ಆರಂಭದಲ್ಲಿ ಐದು ಸ್ಥಳಗಳಲ್ಲಿ ಕೇವಲ ೫೦೦ ಮಂದಿ ಭಾಗವಹಿಸಿದ್ದು, ಪ್ರಸ್ತುತ ದೇಶದಾದ್ಯಂತ ಸುಮಾರು ೮ ಸಾವಿರ ಸ್ಥಳಗಳಲ್ಲಿ ಆಯೋಜಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ಇದೇ ವೇಳೆ ದೈನಂದಿನ ಸೈಕ್ಲಿಂಗ್ ಅನ್ನು ಅಳವಡಿಸಿಕೊಂಡು ಆರೋಗ್ಯವಾಗಿರಲು ಸಚಿವರು ಜನರಿಗೆ ಮನವಿ ಮಾಡಿದರು.

<><><><>

ವಿದ್ಯುತ್ ಚಲನ ಶೀಲತೆ, ಉದ್ಯೋಗ ಮತ್ತು ಜೀವನೋಪಾಯದ ಪ್ರಬಲ ಎಂಜಿನ್ ಆಗಿ ಹೊರಹೊಮ್ಮುತ್ತಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿಂದು ನಡೆದ ಎಲೆಕ್ಟ್ರಿಕ್ ವಾಹನ ಎಕ್ಸ್‌ಪೋಗೆ ಭೇಟಿ ನೀಡಿ, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,

ಸರ್ಕಾರದ ಬೆಂಬಲಿತ ಪರಿಸರ ವ್ಯವಸ್ಥೆಯು ಕಡಿಮೆ ಹೂಡಿಕೆಯೊಂದಿಗೆ ಯುವ ಉದ್ಯಮಿಗಳಿಗೆ ಇವಿ ಸಂಬಂಧಿತ ಉದ್ದಿಮೆಗಳು ಆರಂಭಿಸಲು ಹಾಗೂ ಅವುಗಳನ್ನು ಹೆಚ್ಚಿನ ವಹಿವಾಟು ಹೊಂದಿದ ಉದ್ಯಮಗಳಾಗಿ ವಿಸ್ತರಿಸಲು ಅವಕಾಶ ನೀಡಿದೆ ಎಂದು ತಿಳಿಸಿದರು.

<><><><>

ಮಾಜಿ ಅಗ್ನಿವೀರರಿಗೆ ಬಿಎಸ್‌ಎಫ್ ನೇಮಕಾತಿ ಮೀಸಲಾತಿಯನ್ನು ಕೇಂದ್ರ ಗೃಹ ಸಚಿವಾಲಯವು ಶೇಕಡಾ ೧೦ ರಿಂದ ೫೦ ಕ್ಕೆ ಹೆಚ್ಚಿಸಿದೆ. ಗೆಜೆಟ್ ಅಧಿಸೂಚನೆಯ ಪ್ರಕಾರ, ಮಾಜಿ ಅಗ್ನಿವೀರರ ಮೊದಲ ಬ್ಯಾಚ್ ಐದು ವರ್ಷಗಳವರೆಗೆ ಗರಿಷ್ಠ ವಯೋಮಿತಿ ಸಡಿಲಿಕೆಯನ್ನು ಪಡೆಯುತ್ತದೆ. ಉಳಿದ ಮಾಜಿ ಅಗ್ನಿವೀರರಿಗೆ ಮೂರು ವರ್ಷಗಳ ಸಡಿಲಿಕೆ ಸಿಗುತ್ತದೆ. ಮಾಜಿ ಅಗ್ನಿವೀರರಿಗೆ ದೈಹಿಕ ಗುಣಮಟ್ಟ ಪರೀಕ್ಷೆ ಮತ್ತು ದೈಹಿಕ ದಕ್ಷತೆ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುವುದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಅಧಿಸೂಚನೆಯ ಪ್ರಕಾರ, ಶೇಕಡ ೫೦ರಷ್ಟು ನೇರ ನೇಮಕಾತಿ ಸೇರಿದಂತೆ, ಮಾಜಿ ಅಗ್ನಿವೀರರಿಗೆ ಮತ್ತು ಮಾಜಿ ಸೈನಿಕರಿಗೆ ಶೇಕಡ ಹತ್ತು ಮತ್ತು ವಾರ್ಷಿಕ ಖಾಲಿ ಹುದ್ದೆಯನ್ನು ಯುದ್ಧದಲ್ಲಿ ಭಾಗವಹಿಸಿದ ಕಾನ್ಸಟೇಬಲ್‌ಗಳಿಗೆ ಶೇಕಡ ೩ ರಷ್ಟು ಮೀಸಲಿಡಲಾಗುವುದು ಎಂದು ಮಾಹಿತಿ ನೀಡಿದೆ.

<><><><>

ರೈಲ್ವೆ ಇಲಾಖೆಯು ದರ ಪರಿಷ್ಕರಣೆಗೆ ನಿರ್ಧರಿಸಿದ್ದು, ಇದೇ ೨೬ ರಿಂದ ನೂತನ ದರ ಜಾರಿಯಾಗಲಿದೆ. ಪರಿಷ್ಕೃತ ರಚನೆಯಡಿಯಲ್ಲಿ, ಸಾಮಾನ್ಯ ವರ್ಗದಲ್ಲಿ ೨೧೫ ಕಿಲೋಮೀಟರ್‌ಗಳವರೆಗಿನ ಪ್ರಯಾಣಕ್ಕೆ ಯಾವುದೇ ದರ ಹೆಚ್ಚಳವಿರುವುದಿಲ್ಲ. ಸಾಮಾನ್ಯ ವರ್ಗದಲ್ಲಿ ಪ್ರತಿ ಕಿಲೋಮೀಟರ್‌ಗೆ ೧ ಪೈಸೆ ಹೆಚ್ಚಾಗಲಿದ್ದು, ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳಲ್ಲಿ ಹವಾನಿಯಂತ್ರಿತವಲ್ಲದ ವರ್ಗಕ್ಕೆ ಪ್ರತಿ ಕಿಲೋಮೀಟರ್‌ಗೆ ೨ ಪೈಸೆ ಹೆಚ್ಚಾಗಲಿವೆ. ಹವಾನಿಯಂತ್ರಿತ ವರ್ಗದಲ್ಲಿ, ಪ್ರತಿ ಕಿಲೋಮೀಟರ್‌ಗೆ ೨ ಪೈಸೆ ದರವನ್ನು ಹೆಚ್ಚಿಸಿವೆ. ಹೊಸ ದರ ಜಾರಿಗೊಳಿಸುವಿಕೆಯಿಂದ ಸುಮಾರು ೬ ನೂರು ಕೋಟಿ ರೂಪಾಯಿ ಹೆಚ್ಚುವರಿ ಆದಾಯ ಗಳಿಸುವ ನಿರೀಕ್ಷೆಯಿದೆ ಎಂದು ರೈಲ್ವೆ ಇಲಾಖೆ ತಿಳಿಸಿವೆ.

<><><><>

ದುಬೈನ ಐಸಿಸಿ ಅಕಾಡೆಮಿ ಮೈದಾನದಲ್ಲಿ ಇಂದು ನಡೆಯುತ್ತಿರುವ ೨೦೨೫ರ ಎಸಿಸಿ ೧೯ ವರ್ಷದೊಳಗಿನ ಪುರುಷರ ಏಷ್ಯಾ ಕಪ್‌ನ ಏಕದಿನ ಕ್ರಿಕೆಟ್‌ನ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನ ಭಾರತ ವಿರುದ್ಧ ೧೯೧ ರನ್‌ಗಳ ಜಯ ಸಾಧಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ಭಾರತಕ್ಕೆ ಗೆಲ್ಲಲು ೩೪೮ ರನ್‌ಗಳ ಗುರಿ ನೀಡಿತ್ತು. ಭಾರತ ತನ್ನೆಲ್ಲ ವಿಕೆಟ್ ಕಳೆದುಕೊಂಡು ೨೬.೨ ಓವರ್‌ಗಳಲ್ಲಿ ೧೫೬ ರನ್‌ಗಳಿಸಲಷ್ಟೇ ಶಕ್ತವಾಯಿತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>